# ಆಲೂರಿನ ಸಿವಿಲ್ ಜಡ್ಜ್ ಹಾಗೂ ಜೆ ಎಂ ಎಫ್ ಸಿ ರವರ ನ್ಯಾಯಾಲಯ

## ಸಿಸಿ ನಂಃ 191/2015

ಪಿರ್‍ಯಾದಿಃ- ಕೆ.ನಾಗರಾಜಯ್ಯ
ರಸಗೊಬ್ಬರ ಪರಿವೀಕ್ಷಕರು ಹಾಗೂ ಸಹಾಯಕ ಕೃಷಿ ನಿರ್ದೇಶಕರು (ವಿ.ತ), ಕೃಷಿ ಇಲಾಖೆ, ಜಂಟಿ ಕೃಷಿ ನಿರ್ದೇಶಕರ ಕಛೇರಿ, ಸಂತೇಪೇಟೆ, ಹಾಸನ.

ವಿರುದ್ಧ

ಆರೋಪಿಗಳುಃ- 1. ಶ್ರೀ ಡಿ.ಎಸ್.ಪುಟ್ಟರಾಜು,
ತಂದೆಃ ಪೌತಿ ಡಿ.ಎನ್.ಶಿವನಂಜಪ್ಪ ,
ಪ್ರಾಯಃ ಸುಮಾರು 60 ವರ್ಷ,
ಶ್ರೀ ಮಾರುತಿ ಮೆನ್ಯೂರ್ ಡಿಪೋ,
ಆಲೂರು,
ಹಾಸನ ತಾಲ್ಲೂಕು, ಹಾಸನ ಜಿಲ್ಲೆ.
(ಮಾರಾಟಗಾರರು)

2. ಶ್ರೀ ಆರ್.ಕೃಷ್ಣಕುಮಾರ್,
ತಂದೆಃ ಆರ್.ವೆಂಕಯ್ಯ,
ಪ್ರಾಯಃ ಸುಮಾರು 44 ವರ್ಷ,
ನಾಗಾರ್ಜುನ ಫರ್ಟಿಲೈಸರ್ ಆ್ಯಂಡ್ ಕೆಮಿಕಲ್ಸ್ ಲಿ.,
ಹೆಚ್.ನಂ. 140, ಎ, ವಾರ್ಡ್ ನಂ.18,
ಎಡಭಾಗದ ಮೊದಲನೇ ಅಡ್ಡ ರಸ್ತೆ,
ವಿಶ್ವೇಶ್ವರಯ್ಯ ನಗರ, ಕಪ್ಪಗಲ್ ರಸ್ತೆ,
ಬಳ್ಳಾರಿ.
(ತಯಾರಕರು).

# ದೋಷಾರೋಪಣೆ

ಆಶಾ ಕೆ.ಎಸ್, ಬಿ.ಎ.ಎಲ್.ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು ಆಲೂರು, ಆದ ನಾನು ನಿಮ್ಮ ವಿರುದ್ದ ಈ ಕೆಳಕಂಡಂತೆ ದೋಷರೊಪಣೆ ಮಾಡುತ್ತಿದ್ದೇನೆ.

ದಿನಾಂಕಃ14-2-2013ರಂದು ಮಧ್ಯಾಹ್ನ 1.00 ಗಂಟೆಯಲ್ಲಿ ಆಲೂರಿನಲ್ಲಿರುವ ಶ್ರೀಮಾರುತಿ ಮೆನ್ಯೂರ್ ಡಿಪೋನಲ್ಲಿ, 1ನೇ ಆರೋಪಿಯಾದ ನೀವು ನಾಗಾರ್ಜುನ ಪರ್ಟಿಲೈಸರ್ಸ್ ಆ್ಯಂಡ್ ಕೆಮಿಕಲ್ಸ್ ಲಿ., ಕಂಪನಿಯ ಗುಣಮಟ್ಟವಲ್ಲದ ರಸಗೊಬ್ಬರವನ್ನು ಮಾರಾಟ ಮಾಡಿದ್ದು, ಕಲಂ 19(ಎ)(ಬಿ) ಪರ್ಟಿಲೈಸರ್ಸ್ ಕಂಟ್ರೋಲ್ ಆ್ಯಕ್ಟ್ 1985 ಮತ್ತು ಕಲಂ 3 ಮತ್ತು 7ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯೊಳಗೆ ಮಾಡಿರುತ್ತೀರಿ ಎಂದು ಆರೋಪ ಮಾಡಲಾಗಿದೆ.

ಎರಡನೇಯಾದಾಗಿ, 2ನೇ ಆರೋಪಿಯಾದ ನೀವು ಗುಣಮಟ್ಟವಲ್ಲದ ರಸಗೊಬ್ಬರವನ್ನು ನಿಮ್ಮ ಕಂಪನಿಯಾದ ನಾಗಾರ್ಜುನ ಫರ್ಟಿಲೈಸರ್ಸ್ ಆ್ಯಂಡ್ ಕೆಮಿಕಲ್ಸ್ ಲಿ.,ನಲ್ಲಿ ತಯಾರಿಸಿ ವಿತರಿಸಿದ್ದು ಕಲಂ 19(ಎ)(ಬಿ) ಫರ್ಟಿಲೈಸರ್ಸ್ ಕಂಟ್ರೋಲ್ ಆ್ಯಕ್ಟ್ 1985 ಮತ್ತು ಕಲಂ 3 ಮತ್ತು 7ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯೊಳಗೆ ಮಾಡಿರುತ್ತೀರಿ ಎಂದು ಆರೋಪ ಮಾಡಲಾಗಿದೆ.

ಪ್ರಶ್ನೆಃ1ಃ ಈಗ ಓದಿ ಹೇಳಿದ ವಿಷಯವು ನಿಮಗೆ ಅರ್ಥವಾಯಿತೆ?

ಉತ್ತರಃ- ಆ.1ಃ

ಆ.2ಃ

ಪ್ರಶ್ನೆಃ2ಃ ತಪ್ಪಾಯಿತೆನ್ನುವಿರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ- ಆ.1ಃ

ಆ.2ಃ

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ, ಅವರಿಂದ ಬಂದ ಉತ್ತರವನ್ನು ಸರಿಯಾಗಿ ಬರೆದಿದ್ದೇನೆಂದು ಧೃಡೀಕರಿಸಿರುತ್ತೇನೆ.)

ಸ್ಥಳಃ ಆಲೂರು                    ಸಿವಿಲ್ ಜಡ್ಜ್ ಹಾಗೂ ಜೆಎಂಎಫ್‌ಸಿ,
ದಿನಾಂಕಃ 4-9-2018.                    ಆಲೂರು.